# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 272 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ದಿನಾಂಕ | 06-12-2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ದೇವಲಪುರ ಗ್ರಾಮದಲ್ಲಿ ಶ್ರೀ ಹಾಲುರಾಮೇಶ್ವರ ದೇವಸ್ಥಾನದಲ್ಲಿ ಸಿಬ್ಬಂದಿಗಳಿಗೆ ಹಾಗೂ ವಿಜಯನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ದೇವಾಲಯದಲ್ಲಿನ ನೌಕರರಿಗೆ ಸರ್ಕಾರದ ಆದೇಶ ಸಂಖ್ಯೆ: ಕಂಇ:54:ಮುಸೇವಿ:2017 ದಿನಾಂಕ: 17.07.2019ರ ಆದೇಶದನ್ವಯ ವೇತನ ಶ್ರೇಣಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಸದರಿ ವೇತನ ಶ್ರೇಣಿ ನೀಡದಿರಲು ಕಾರಣಗಳೇನು; | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ನಿಯಮ 2002ರ ನಿಯಮ 8 ಉಪನಿಯಮ2(i)ರಂತೆ, ದೇವಾಲಯದ ನೌಕರರು ಮತ್ತು ಅರ್ಚಕರಿಗೆ ವಾರ್ಷಿಕ ವೆಚ್ಚವು, ದೇವಾಲಯದ ವಾರ್ಷಿಕ ಆದಾಯದ ಶೇಕಡ 35 ಮೀರಬಾರದು ಎಂದಿರುತ್ತದೆ.<br><br>ಆದ್ದರಿಂದ ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ದೇವಲಪುರ ಗ್ರಾಮದಲ್ಲಿ ಶ್ರೀ ಹಾಲುರಾಮೇಶ್ವರ ಹಾಗೂ ವಿಜಯನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ದೇವಾಲಯಗಳಲ್ಲಿ ದೇವಾಲಯದ ನೌಕರರು ಮತ್ತು ಅರ್ಚಕರಿಗೆ ವಾರ್ಷಿಕ ವೆಚ್ಚವು, ದೇವಾಲಯದ ವಾರ್ಷಿಕ ಆದಾಯದ ಶೇಕಡ 35 ರಷ್ಟು ದೇವಾಲಯಗಳ ಸಿಬ್ಬಂದಿ ವೆಚ್ಚವು ಮೀರಿರುವುದರಿಂದ, ವೇತನ ಶ್ರೇಣಿ ಮಂಜೂರು ಮಾಡಿರುವುದಿಲ್ಲ. ದೇವಾಲಯದ ವಾರ್ಷಿಕ ಆದಾಯದಲ್ಲಿ ಸಿಬ್ಬಂದಿ ವೆಚ್ಚವು ಶೇ.35ರಷ್ಟು ಮೀರಿರುವ ಹಿನ್ನಲೆಯಲ್ಲಿ, ಕಾಯ್ದೆ/ನಿಯಮಗಳನುಸಾರ ವೇತನ ಶೇಣಿ ನೀಡಲು ಅವಕಾಶವಾಗಿರುವುದಿಲ್ಲ. |

| | | |
|---|---|---|
| ಇ) | ಯಾವ ಕಾಲಮಿತಿಯಲ್ಲಿ ಸದರಿ ಸಿಬ್ಬಂದಿಗಳಿಗೆ ವೇತನಶ್ರೇಣಿ ನೀಡಲಾಗುವುದು? | ಪ್ರಸ್ತುತ ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ದೇವಲಪುರ ಗ್ರಾಮದಲ್ಲಿ ದೇವಾಲಯದ ವಾರ್ಷಿಕ ಆದಾಯವು ಹೆಚ್ಚಾಗಿರುವುದರಿಂದ ದೇವಾಲಯದ ಆಯ್ಯ ವ್ಯಯ ಮಂಜೂರಾತಿಯನ್ನು ಪಡೆದು ಸರ್ಕಾರದ ದಿ:17.07.2019ರ ಆದೇಶದನ್ವಯ ದೇವಾಲಯದ ನೌಕರರಿಗೆ ವೇತನಶ್ರೇಣಿಯನ್ನು ನೀಡಲು ದೇವಾಲಯದ ಉಪವಿಭಾಗಧಿಕಾರಿಗಳು, ಚಿತ್ರದುರ್ಗ ಉಪವಿಭಾಗರವರು ದಿನಾಂಕ:24/08/2021ರಲ್ಲಿ ಆದೇಶವನ್ನು ಹೊರಡಿಸಲಾಗಿದ್ದು ಅದರಂತೆ ಕ್ರಮವಹಿಸಲಾಗಿರುತ್ತದೆ.<br><br>ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ಕಂಇ 54 ಮುಸೇವಿ 2017 ದಿನಾಂಕ:17.07.2019ರ ಆದೇಶದ ಷರತ್ತು ಸಂಖ್ಯೆ; 5 ರಂತೆ ವಿಜಯನಗರ ಜಿಲ್ಲೆಗೆ ಸಂಬಂಧಿಸಿದ ದೇವಾಲಯಗಳ ಸಿಬ್ಬಂದಿ ಮಾದರಿಗೆ ಸರ್ಕಾರದಿಂದ ಅನುಮೋದನೆ ನೀಡಿ ದೇವಾಲಯದ ಆದಾಯಕ್ಕೆ ಅನುಗುಣವಾಗಿ ನಿಯಮಾನುಸಾರ ದೇವಾಲಯದ ಸಿಬ್ಬಂದಿಗಳಿಗೆ ವೇತನ ಶ್ರೇಣಿ ನೀಡುವ ಬಗ್ಗೆ ಪರಿಶೀಲಿಸಲಾಗುವುದು. |

ಸಂಖ್ಯೆ: ಕಂಇ 115 ಮುಸಪ್ರ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-1

## ವಿಜಯನಗರ ಜಿಲ್ಲೆಯ "ಎ" & "ಬಿ" ಶ್ರೇಣಿ ದೇವಸ್ಥಾನಗಳ ವಿವರ

| ಕ್ರಸಂ | ದೇವಸ್ಥಾನದ ಹೆಸರು | ಗ್ರಾಮ | ತಾಲ್ಲೂಕು | ಶ್ರೇಣಿ | ವೇತನ ಶ್ರೇಣಿ ನೀಡಲಾಗಿದೆಯೇ |
|---|---|---|---|---|---|
| 1 | ಶ್ರೀ ವಿರೂಪಾಕ್ಷೇಶ್ವರ ಸ್ವಾಮಿ ದೇವಸ್ಥಾನ, ಹಂಪಿ. | ಹಂಪಿ | ಹೊಸಪೇಟೆ | "ಎ" | ನೀಡಲಾಗಿದೆ |
| 2 | ಶ್ರೀ ಎಳುಕೆರೆ ನಾಗಪ್ಪ ಸ್ವಾಮಿ ದೇವಸ್ಥಾನ, | ಬುಕ್ಕಸಾಗರ | ಹೊಸಪೇಟೆ | "ಎ" | ನೀಡಲಾಗಿದೆ |
| 3 | ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನ, ಕೊಟ್ಟೂರು. | ಕೊಟ್ಟೂರು | ಕೊಟ್ಟೂರು | "ಎ" | ನೀಡಲಾಗಿದೆ |
| 4 | ಶ್ರೀ ಮೈಲಾರಲಿಂಗ ಸ್ವಾಮಿ ದೇವಸ್ಥಾನ, | ಮೈಲಾರ. | ಹೂವಿನಹಡಗಲಿ | "ಎ" | ನೀಡಲಾಗಿದೆ |
| 5 | ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ, | ಕುರುವತ್ತಿ ಗ್ರಾಮ. | ಹೂವಿನಹಡಗಲಿ | "ಎ" | ನೀಡಲಾಗಿದೆ |
| 6 | ಶ್ರೀ ಉತ್ಸವಾಂಬ ದೇವಸ್ಥಾನ, | ಉಚ್ಚಂಗಿದುರ್ಗ. | ಹರಪನಹಳ್ಳಿ | "ಎ" | ನೀಡಲಾಗಿದೆ |
| 7 | ಶ್ರೀ ಗೋಣಿಬಸವೇಶ್ವರಸ್ವಾಮಿ ದೇವಸ್ಥಾನ, | ಕೂಲಹಳ್ಳಿ ಗ್ರಾಮ, | ಹರಪನಹಳ್ಳಿ | "ಎ" | ನೀಡಲಾಗಿದೆ |
| 8 | ಶ್ರೀ ಹೊಸೂರಮ್ಮ ದೇವಸ್ಥಾನ, | ಹೊಸೂರು ಗ್ರಾಮ | ಹೊಸಪೇಟೆ | "ಬಿ" | ನೀಡಲಾಗಿದೆ |
| 9 | ಶ್ರೀ ವಡಕರಾಯ ರಂಗನಾಥ ಸ್ವಾಮಿ ದೇವಸ್ಥಾನ, | ಹೊಸಪೇಟೆ ನಗರ | ಹೊಸಪೇಟೆ | "ಬಿ" | ನೀಡಲಾಗಿದೆ |
| 10 | ಶ್ರೀ ಗ್ರಾಮ ದೇವತಾ ಊರಮ್ಮ ದೇವಸ್ಥಾನ, | ಹೊಸಪೇಟೆ ನಗರ | ಹೊಸಪೇಟೆ | "ಬಿ" | ನೀಡಲಾಗಿದೆ |
| 11 | ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನ ಮತ್ತು ಶ್ರೀ ಬೆಟ್ಟದಮಲ್ಲೇಶ್ವರಸ್ವಾಮಿ ದೇವಸ್ಥಾನ, | ಸೋಗಿ | ಹೂವಿನಹಡಗಲಿ | "ಬಿ" | ನೀಡಲಾಗಿದೆ |

RD/115/MSPA/2023-MUZ-REVENUE DEPATMENT SEC
0545/2023/RD-MUZ

ಅನುಬಂಧ-2

| ವಿಜಯನಗರ ಜಿಲ್ಲೆಯ "ಎ" & "ಬಿ" ಶ್ರೇಣಿ ದೇವಸ್ಥಾನಗಳ ವಿವರ | | | | | |
|---|---|---|---|---|---|
| ಕ್ರಸಂ | ದೇವಸ್ಥಾನದ ಹೆಸರು | ಗ್ರಾಮ | ತಾಲೂಕು | ಶ್ರೇಣಿ | ವೇತನ ಶ್ರೇಣಿ ನೀಡಲಾಗಿದೆಯೇ |
| 1 | ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, | ಮರಿಯಮ್ಮನಹಳ್ಳಿ | ಹೊಸಪೇಟೆ | "ಎ" | ಇಲ್ಲ |
| 2 | ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ದೇವಸ್ಥಾನ, | ಉಜ್ಜಯಿನಿ. | ಕೊಟ್ಟೂರು | "ಎ" | ಇಲ್ಲ |
| 3 | ಶ್ರೀ ಆಂಜನೇಯಸ್ವಾಮಿ ದೇವಸ್ಥಾನ | ಮದಲಘಟ್ಟ | ಹೂವಿನಹಡಗಲಿ | "ಎ" | ಇಲ್ಲ |
| 4 | ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿ ದೇವಸ್ಥಾನ | ದೇವರತಿಮ್ಮಲಾಪುರ | ಹರಪನಹಳ್ಳಿ | "ಬಿ" | ಇಲ್ಲ |

ಆಯುಕ್ತರ ಕಛೇರಿ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮದಾಯ ದತ್ತಿಗಳ ಇಲಾಖೆ,
ಚಾಮರಾಜಪೇಟೆ, ಬೆಂಗಳೂರು-560 018

RD/115/MSPA/2023-MUZ-REVENUE DEPATMENT SEC
30545 2023/RD-MUZ